# ಪ್ರೊ. ಎಂ.ಎಚ್. ಕೃಷ್ಣಯ್ಯ

ಅಧ್ಯಾಪಕರು, ರೀಡರ್, ಪ್ರೊಫೆಸರ್ ಆಗಿ ಮೈಸೂರು, ಬೆಂಗಳೂರು ಕೋಲಾರ, ಮಂಗಳೂರು ಮುಂತಾದ ಕಡೆಗಳಲ್ಲಿ ಸೇವೆ ಸಲ್ಲಿಸಿ ಅದರ ಜೊತೆಗೇ ಹಲವಾರು ವರ್ಷಗಳಿಂದ ಸಾಹಿತ್ಯ, ಸಂಪಾದನೆ ಹಾಗೂ ಪತ್ರಿಕಾ ಬರವಣಿಗೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಹಿರಿಯ ಸಾಹಿತಿಗಳಾದ ಕಲಾವಿಮರ್ಶಕರೂ, ಬಹುಮುಖ ಪ್ರತಿಭೆಯುಳ್ಳವರೂ ಆದ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರು ೨೭-೧೧-೨೦೦೮ ರಂದು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಜವಾಬ್ದಾರಿಯನ್ನು ವಹಿಸಿಕೊಂಡರು.

ಎಂ.ಎಚ್.ಕೆ. ಅವಧಿಯಲ್ಲಿ ಬಹಳ ಮುಖ್ಯವಾಗಿ ಕೈಗೊಂಡ ಯೋಜನೆಯೆಂದರೆ ಅಕಾಡೆಮಿಯು ಕಾರ್ಯನಿರ್ವಹಣೆಗೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿದುದು. ಸಾಧಾರಣ ಜನಜೀವನ ಬಹುತೇಕ ಹಂತಗಳಲ್ಲೂ ತಂತ್ರಜ್ಞಾನವು ವ್ಯಾಪಕವಾಗಿ ಬಳಕೆಯಾಗುತ್ತಿರುವ ಇಂದಿನ ಕಾಲದಲ್ಲಿ ಈ ಬದಲಾವಣೆ ಸಾಹಿತ್ಯ ಅಕಾಡೆಮಿಗೆ ಒಂದು ಹೊಸ ಆಯಾಮವನ್ನೇ ನೀಡಿತೆನ್ನಬಹುದು. ಈ ಯೋಜನೆಗಳ ಮೊದಲ ಹಂತವಾಗಿ ಅಕಾಡೆಮಿಯ ಅಂತರಜಾಲ ತಾಣವನ್ನು ಉದ್ಘಾಟಿಸಲಾಯಿತು. ಇದರಿಂದಾಗಿ ಹೊರ ಪ್ರಪಂಚದ ಸಂಪರ್ಕ ಮತ್ತು ಇತರರಿಗೆ ಅಕಾಡೆಮಿಯೊಂದಿಗೆ ಹೊಂದಬಹುದಾದ ಸಂಪರ್ಕದ ಹಾದಿ ಸುಗಮವಾಯಿತು. ಪ್ರೊ.ಎಂ.ಎಚ್.ಕೃಷ್ಣಯ್ಯ ಅವರ ಇನ್ನೊಂದು ಮಹತ್ವ ಪೂರ್ಣಯೋಜನೆಯೇ 'ಕವಿವಾಣಿ' ಇದರಲ್ಲಿ ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಎಚ್.ಎಸ್.ವೆಂಕಟೇಶಮೂರ್ತಿ, ಡಾ. ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಡಾ.ಬರಗೂರು ರಾಮಚಂದ್ರಪ್ಪ ಮುಂತಾದ ಹಿರಿಯ ಹಾಗೂ ಪ್ರಖ್ಯಾತ ಕವಿಗಳಿಂದ ಪ್ರಾರಂಭವಾಗಿ ನೂರೈವತ್ತು ಕವಿಗಳ ಸ್ವಂತ ಕವಿತೆಯ ವಾಚನ ಮಾಡುತ್ತಿರುವ ದೃಶ್ಯಗಳನ್ನು ಅವರವರ ಮನೆ ಪರಿಸರದಲ್ಲಿ ಚಿತ್ರೀಕರಿಸಿ ಅವನ್ನು ಅಂತರ ಜಾಲತಾಣಕ್ಕೆ ಅಳವಡಿಸಲಾಗಿದೆ. ಇವುಗಳ ಅಡಕ ಮುದ್ರಿಕೆಗಳೂ ಲಭ್ಯ. ಹಿಂದಿನ ಅಧ್ಯಕ್ಷರುಗಳ ಆಲೋಚನೆಯೊಂದಿಗೆ ಇಂದಿನ ಯುವಜನರ ಅಗತ್ಯಕ್ಕನುಗುಣವಾಗಿ ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ತಿಳಿಯಪಡಿಸಲು ಕೈಗೊಂಡ ಈ ಅಂತರಜಾಲ ಕವಿತೆಯ ಓದು ಇಂದು ಜನಪ್ರಿಯವಾಗಿದ್ದು ಮುಖ್ಯವಾಗಿ ಯುವಜನತೆಯನ್ನು ಸಾಹಿತ್ಯದೆಡೆಗೆ ಆಕರ್ಷಿಸುತ್ತಿದೆ. ಇವೆಲ್ಲದರೊಂದಿಗೆ ಈ ಮೂರು ವರ್ಷದ ಅವಧಿಯಲ್ಲಿ ನಾಡಿನಾದ್ಯಂತ ಸಾಹಿತ್ಯಾಸಕ್ತರು ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಿಚಾರ ಸಂಕಿರಣಗಳು, ಕಾವ್ಯ ಮತ್ತು ಕಥಾ ಕಮ್ಮಟಗಳನ್ನು ಆಯೋಜಿಸಿದ್ದಾರೆ. ಇದಲ್ಲದೆ ಹೊರನಾಡ ಕನ್ನಡಿಗರ ಸಾಹಿತ್ಯಾಭಿರುಚಿಗೆ ತಕ್ಕಂತೆ ಕಾರ್ಯಕ್ರಮ, ಹಿರಿಯ ಸಾಹಿತಿಗಳ ಜನ್ಮಶತಮಾನೋತ್ಸವದಂತಹ ಸಮಾರಂಭಗಳೂ ನಡೆದಿವೆ.

ಹಾಗೆಯೇ 'ಚಿನ್ನದ ಹಬ್ಬ'ದ ಅಂಗವಾಗಿ ಅಕಾಡೆಮಿಯ ಮಾಜಿ ಅಧ್ಯಕ್ಷರುಗಳ ಸಾಕ್ಷ್ಯಚಿತ್ರ ಮಾಲಿಕೆಯಡಿ ಡಾ. ಜಿ.ಎಸ್. ಶಿವರುದ್ರಪ್ಪ ಮತ್ತು ಪ್ರೊ. ನಿಸಾರ್ ಅಹಮದ್ ಅವರ ಸಾಕ್ಷ್ಯಚಿತ್ರಗಳು ನಿರ್ಮಾಣಗೊಂಡವು.